ದಿನಾಂಕ : 19.09.2024

ಅಸಲು ದಾವೆ: 54/2011 ಡಿ.ಡಬ್ಲ್ಯೂ: 3

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಪಿ.ಎಸ್ ರವರಿಂದ :</u>**

ನಿಡಿ.35 ದಾಖಲಾತಿಯ ನಕಲು ಪಡೆದ ದಿನಾಂಕ 19.01.11 ಎಂದು ನಮೂದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. 11 ನೇ ಇಸವಿಯಲ್ಲಿ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ನಿಡಿ.35 ಅನ್ನು ನನ್ನ ತಂದೆ ಪುಟ್ಟಸ್ವಾಮಿಯವರೇ ಪಡೆದುಕೊಂಡಿರುತ್ತಾರೆ. ಸದರಿ ನಿಡಿ.35 ದಾಖಲಾತಿ ನನ್ನ ತಂದೆ ಪೆಟ್ಟಿಗೆಯಲ್ಲಿ ಇತ್ತು. 11 ನೇ ಇಸವಿಯಾದ ಮೇಲೆ 6 ವರ್ಷ ನಮ್ಮ ತಂದೆ ಬದುಕಿದ್ದರು. ಆ 6 ವರ್ಷದ ಅವದಿಯಲ್ಲಿ ನಿಡಿ.35 ರೀತಿಯ ಒಂದು ದಾಖಲಾತಿ ಇದೆ ಎಂದು ನಮ್ಮ ತಂದೆ ನನ್ನ ಬಳಿ ಮಾತನಾಡಿರಲಿಲ್ಲ. ನಿಡಿ.35 ದಾಖಲಾತಿಯನ್ನು ನಿಮ್ಮ ತಂದೆ ಬದುಕಿರುವ ಕಾಲದಲ್ಲಿ ಯಾವ ಕಾರಣಕ್ಕೆ ಹಾಜರು ಪಡಿಸಿಲ್ಲ ಎಂದು ಹೇಳಬಹುದಾ ಎಂದರೆ ಸಾಕ್ಷಿ ಹಾಜರು ಪಡಿಸಿರಬಹುದು ಈ ದಾಖಲಾತಿ ನಮ್ಮ ತಂದೆಯ ಪೆಟ್ಟಿಗೆಯನ್ನು ನಾನು ಹುಡುಕಿದಾಗ ಸಿಕ್ಕಿರುತ್ತದೆ ಎಂದು ಉತ್ತರಿಸುತ್ತಾರೆ. ನಿಡಿ.35 ಅನ್ನು ನಾನು ಸುಮಾರು 15 ದಿನಗಳ ಹಿಂದೆ ನನ್ನ ತಂದೆಯ ಪೆಟ್ಟಿಗೆಯಿಂದ ಹುಡುಕಿ ತೆಗೆದಿರುತ್ತೇನೆ. ನಿಡಿ.35 ಎಂ.ಆರ್ ಗೆ ಸಂಬಂದಪಟ್ಟಂತೆ ಏನೆಲ್ಲಾ ವ್ಯವಹಾರಗಳು ನಡೆದಿವೆ ನಾನು ಸಂಬಂಧಪಟ್ಟ ಇಲಾಖೆಗೆ ಹೋಗಿ ವಿಚಾರ ಮಾಡಿರುವುದಿಲ್ಲ. ನಿಡಿ.35 ಅನ್ನು ನಿಮ್ಮ ತಂದೆ ಬನಾವಟ್ ಮಾಡಿರುವ ಕಾರಣ ಅದನ್ನು ನ್ಯಾಯಾಲಯಕ್ಕೆ ಕೊಡದೆ ತಾವೇ ಬಚ್ಚಿಟ್ಟುಕೊಂಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಡಿ.35 ಎರಡು ಸ್ವತ್ತುಗಳಿಗೆ ಮಾತ್ರ ಸಂಬಂಧಪಟ್ಟಿರುತ್ತದೆ. ಉಳಿದ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈ ರೀತಿಯ ಎಂ.ಆರ್. ವ್ಯವಹಾರಗಳು ಆಗಿವೆಯಾ ಎಂದರೆ ಸಾಕ್ಷಿ ಆಗಿಲ್ಲ ಎಂದು ಉತ್ತರಿಸುತ್ತಾರೆ. ಆ ಆಸ್ತಿಗಳಿಗೆ ಯಾವ ಕಾರಣಕ್ಕೆ ಎಂ.ಆರ್. ಗಳು ಆಗಿಲ್ಲ ಎಂದು ನಿಮಗೆ ಹೇಳಲು ಆಗುವುದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನಿಡಿ.35 ರಲ್ಲಿ ನಂಜಾಚಾರಿ ಹಾಗೂ ಪುಟ್ಟಸ್ವಾಮಿರವರ ಜಂಟಿ ಸ್ವತ್ತುಗಳು ಎಂದು ಅದರಲ್ಲಿ ನಮೂದಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಡಿ.35 ರಲ್ಲಿ ನಂಜಾಚಾರಿ ಮತ್ತು ಪುಟ್ಟಸ್ವಾಮಿರವರ ಭಾಗಕ್ಕೆ ಹಂಚಿಕೆಯಾಗಿದೆಯಾ ಎಂದರೆ ಸಾಕ್ಷಿ ಇಲ್ಲ ನಂಜಾಚಾರಿಯವರ ಮಕ್ಕಳಾದ ಪುಟ್ಟಸ್ವಾಮಿ ಮತ್ತು ಮನುಬ್ರಹ್ಮಚಾರಿ ರವರಿಗೆ ವಿಭಾಗ ಮಾಡಿಕೊಟ್ಟಿರುವುದಾಗಿ ನಮೂದಾಗಿದೆ ಎಂದು ಉತ್ತರಿಸುತ್ತಾರೆ. ನಿಡಿ.35 ರಲ್ಲಿ 1992 ರ ವಿಭಾಗದಂತೆ ಹಂಚಿಕೆ ಆಗಿದೆ ಎಂದು ನಮೂದಿದೆಯಾ ಎಂದರೆ ಸಾಕ್ಷಿ ಆ ರೀತಿ ನಮೂದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ.35 ರಲ್ಲಿ ನಂಜಾಚಾರಿಯವರ ಹೆಣ್ಣುಮಕ್ಕಳ ಭಾಗಾಂಶದ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಅದೇ ರೀತಿ ನಿಡಿ.35 ರಲ್ಲಿ ವಾದಿಯರಿಗೆ ನೋಟೀಸ್ ಕೊಡಲಾಗಿದೆ ಎಂದು ನಮೂದಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಡಿ.35 ಯಾವುದೇ ವಿಭಾಗದ ದಾಖಲಾತಿ ಅಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಡಿ.35 ನ್ನು ನಿಮ್ಮ ತಂದೆ ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳುವ ಸಲುವಾಗಿ ವಾದಿಯರಿಗೆ ತಿಳಿಯದಂತೆ ಬನಾವಟ್ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಡಿ.35 ರ ಮೂಲಕ ನಂಜಾಚಾರಿಯವರ ದಾವಾ ಸ್ವತ್ತುಗಳು ನಿಮ್ಮ ತಂದೆಗೆ ಪ್ರಾಪ್ತವಾಗಿಲ್ಲ ಎಂದರೆ ಸಾಕ್ಷಿ ಪ್ರಾಪ್ತವಾಗಿದೆ ಎಂದು ಉತ್ತರಿಸುತ್ತಾರೆ. ನಿಡಿ.35 ದಾಖಲಾತಿ ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಇರುವ ಭಾಗಾಂಶದ ಹಕ್ಕನ್ನು ಬದ್ದಪಡಿಸುವುದಿಲ್ಲ ಎಂದರೆ ಸಾಕ್ಷಿ ಹೆಣ್ಣು ಮಕ್ಕಳಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ.35 ಅನ್ನು ನಿಮ್ಮ ತಂದೆ ವಾದಿಯರಿಗೆ ತಿಳಿಯದಂತೆ ಬನಾವಟ್ ಮಾಡಿ ಇಟ್ಟುಕೊಂಡಿದ್ದರು, ಅದನ್ನು ತಂದು ನೀವು ಈ ಕೇಸಿಗೋಸ್ಕರ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಡಿ.35 ರಲ್ಲಿ ನಮೂದು ಇರುವ ಎರಡು ಸ್ವತ್ತುಗಳನ್ನು ಬಿಟ್ಟರೆ ಉಳಿದ ಮೂರು ಸ್ವತ್ತುಗಳು ಈಗಲೂ ನಂಜಾಚಾರಿಯವರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು